# ಬಂಡಾಯ ಧೋರಣೆಯ ವಿಶಿಷ್ಟ ಧ್ವನಿ ಬಸವರಾಜ ಸಬರದ

**ಆಂಜನೇಯ[1] & ಮಹಾದೇವಿ ಆರ್ ಹಿರೇಮಠ[2]**

[1]ಸಂಶೋಧನಾರ್ಥಿ, ಡಾ.ಆರ್.ಸಿ.ಹಿರೇಮಠ, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

[2]ಸಹ ಪ್ರಾಧ್ಯಾಪಕರು ಹಾಗೂ ಸಂಶೋಧನಾ ಮಾರ್ಗದರ್ಶಕರು, ಕರ್ನಾಟಕ ಕಲಾ ಮಹಾವಿದ್ಯಾಲಯ ಧಾರವಾಡ.

**DOI: https://doi.org/10.5281/zenodo.16677037**

## ABSTRACT:

ಪ್ರಸ್ತುತ ಲೇಖನದಲ್ಲಿ ಬಂಡಾಯ ಕವಿ ಬಸವರಾಜ ಸಬರದರು ಕನ್ನಡ ಸಾಹಿತ್ಯಕ್ಕೆ ನೀಡಿದ ಕೊಡುಗೆಯನ್ನು ಅವಲೋಕಿಸಲಾಗಿದೆ. ಅವರ ಸಾಹಿತ್ಯದ ಮೇಲೆ ಅಂಬೇಡ್ಕರ್, ಲೋಹಿಯಾ, ಕಾರ್ಲ್ ಮಾರ್ಕ್ಸ್ ರ ಚಿಂತನೆಗಳ ಪ್ರಭಾವವನ್ನು ಗಮನಿಸಲಾಗಿದೆ. ಅವರ ಸೃಜನ ಮತ್ತು ಸೃಜನೇತರ ಸಾಹಿತ್ಯದ ಕೃತಿಗಳ ಪಟ್ಟಿಯೊಂದಿಗೆ ಸಾಹಿತ್ಯದ ಧೋರಣೆಯನ್ನು ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ. ಸಬರದರ ಕಾವ್ಯ, ನಾಟಕ, ವಿಚಾರ ಸಾಹಿತ್ಯ, ಸಂಶೋಧನೆ, ವಿಮರ್ಶೆ, ಸಂಪಾದನಾ ಕ್ಷೇತ್ರದಲ್ಲಿನ ಕೃತಿಗಳನ್ನು ಪ್ರತ್ಯೇಕಿಸಿ ವಿವರಿಸಲಾಗಿದೆ. ಮಹಿಳಾ ಮತ್ತು ಜನಪದ ಸಾಹಿತ್ಯ ವಿಮರ್ಶೆಗೆ ನೀಡಿದ ವಿಶೇಷ ಸೇವೆಯನ್ನು ಸ್ಮರಿಸಲಾಗಿದೆ. ಸಬರದ ಸಾಹಿತ್ಯದ ಕುರಿತು ಅವರ ಒಡನಾಡಿಗಳಾದ ಚೆನ್ನಣ್ಣ ವಾಲೀಕರ್, ಬರಗೂರು ರಾಮಚಂದ್ರಪ್ಪನವರ ಅಭಿಪ್ರಾಯಗಳನ್ನು ದಾಖಲಿಸಲಾಗಿದೆ.

## KEYWORDS:

ಸಬರದರ ಕಾವ್ಯ, ನಾಟಕ, ವಿಚಾರ ಸಾಹಿತ್ಯ, ಸಂಕೀರ್ಣ, ಸಂಶೋಧನೆ, ವಿಮರ್ಶೆ, ಸಂಪಾದಿತ ಕೃತಿಗಳು.

### ಪ್ರಸ್ತಾವನೆ:

ವೈವಿಧ್ಯತೆ, ಸಂಖ್ಯಾಬಾಹುಳ್ಯತೆ ಹಾಗೂ ಪರಂಪರೆಯ ನಿರಾಕರಣೆಯ ದೃಷ್ಟಿಯಿಂದ ಅತ್ಯಂತ ಸಮೃದ್ಧವಾದ ಹೊಸಗನ್ನಡ ಸಾಹಿತ್ಯದ ಪ್ರಗತಿಶೀಲ ದಲಿತ–ಬಂಡಾಯದ ಹಂತದಲ್ಲಿ ತಮ್ಮ ಸೃಜನ–ವಿಮರ್ಶೆ ಸಾಹಿತ್ಯದ ಮೂಲಕ ಕನ್ನಡ ಸಾಹಿತ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸಿದವರಲ್ಲಿ ಬಸವರಾಜ ಸಬರದ ಅವರೂ ಒಬ್ಬರು. ಸಬರದರ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಸೇವೆ ವ್ಯಾಪಕವಾಗಿದ್ದು. ಅವರು ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಕೃತಿರಚನೆ ಮಾಡಿದ್ದಾರೆ. ಕಾವ್ಯ, ನಾಟಕ ಹಾಗೂ ವಿಚಾರ ಸಾಹಿತ್ಯ, ಸೃಜನೇತರ ಪ್ರಕಾರಗಳಾದ ವಿಮರ್ಶೆ, ಸಂಶೋಧನೆ, ಸಂಪಾದನೆ

ಕ್ಷೇತ್ರದಲ್ಲಿ ಕೃಷಿಗೈಯುವ ಮೂಲಕ ಕನ್ನಡ ಸಾಹಿತ್ಯಕ್ಕೆ 180 ಕೃತಿಗಳನ್ನು ಕೊಡುಗೆಯಾಗಿ ನೀಡಿದ್ದು ಅವರ ಒಟ್ಟು ಸಾಹಿತ್ಯವನ್ನು ಆಯಾ ಸಾಹಿತ್ಯ ಪ್ರಕಾರಗಳಲ್ಲಿ ವರ್ಗೀಕರಿಸಿ ಚರ್ಚೆಗೊಳಪಡಿಸಿದ್ದೇನೆ.

**ಅ) ಸೃಜನ ಸಾಹಿತ್ಯ:**

**ಕಾವ್ಯ:**

ಸೃಜನ ಸಾಹಿತ್ಯದಲ್ಲಿ ಕಾವ್ಯ ಸಬರದರ ಆಸಕ್ತಿಯ ಕ್ಷೇತ್ರಗಳಲ್ಲೊಂದು. ಅವರ ಸಾಹಿತ್ಯದ ಪಯಣ ಆರಂಭವಾಗಿದ್ದು 'ಹೋರಾಟ'(1976) ಎಂಬ ಕಾವ್ಯದ ಮೂಲಕ. ಇಂದಿಗೆ 15 ಕವನಸಂಕಲನಗಳನ್ನು ರಚಿಸಿ, ಕವಿಯಾಗಿ ಸಾಹಿತ್ಯ ವಲಯದಲ್ಲಿ ಗುರುತಿಸಿಕೊಂಡು ಬೆಳೆದವರು. ಪ್ರಯೋಗಶೀಲ ಕವಿಯಾದ ಸಬರದರ ಕಾವ್ಯದ ವಸ್ತು ವೈವಿಧ್ಯಮಯವಾಗಿದೆ. ಬಂಡಾಯ ಮನೋಧೋರಣೆಯುಳ್ಳ ಸಬರದರು ಮೂಲತಃ ಹಳ್ಳಿಗಾಡು ಪ್ರದೇಶದಿಂದ ಬಂದವರು. ಅವರ ಕಾವ್ಯಗಳಲ್ಲಿ ಸಾಮಾಜಿಕ ನ್ಯಾಯ, ಹೋರಾಟ, ಅಸಮಾನತೆಯ ವಿರುದ್ಧ ಪ್ರತಿಭಟನೆಯಂತಹ ಆಶಯಗಳು ಪ್ರಮುಖವಾಗಿವೆ. ಇವರ ಆರಂಭದ ಕವನಸಂಕಲನಗಳಾದ 'ಹೋರಾಟ', 'ಮೂಡಲಕ ಕೆಂಪ ಮೂಡ್ಯಾವ', 'ದನಿಯೆತ್ತಿ ಹಾಡೇನ' ಮತ್ತು 'ಬೆಳದಿಂಗಳು ಬಿಸಿಲಾಯಿತು' ಮುಂತಾದ ಶೀರ್ಷಿಕೆಗಳನ್ನು ನೋಡಿದಾಗ ಇವರ ಬಂಡಾಯ ಧೋರಣೆ ಸ್ಪಷ್ಟವಾಗುತ್ತದೆ. ಇವರ ಬಂಡಾಯ ನಿಲುವನ್ನು ಕುರಿತು ಡಾ.ಚೆನ್ನಣ್ಣ ವಾಲೀಕರ ಅವರು 'ಮೂಡಲಕ ಕೆಂಪ ಮೂಡ್ಯಾವ' ಸಂಕಲನದ ಬೆನ್ನುಡಿಯಲ್ಲಿ ಹೀಗೆ ಬರೆಯುತ್ತಾರೆ. "ಅನ್ಯಾಯ, ಅತ್ಯಾಚಾರ, ಶೋಷಣೆ, ದಬ್ಬಾಳಿಕೆ, ಅಸಮಾನತೆ ಎಲ್ಲಿಯೇ ಕಾಣಲಿ ಉರಿದು ಬೀಳುವ ಡಾ.ಸಬರದವರ ರೊಚ್ಚು ರೋಷ ಈ ಸಂಕಲನದಲ್ಲಿ ಕ್ರಮೇಣ ಕಲಾತ್ಮಕವಾಗುತ್ತಿರುವುದನ್ನು ಕಾಣುತ್ತೇವೆ. ಮಾನವನ ಬದುಕನ್ನು ರೂಪಿಸುವ ಪ್ರಕೃತಿಯು ಕ್ರಾಂತಿಗೆ, ವ್ಯವಸ್ಥೆಯ ವಿರುದ್ಧ ಹೋರಾಟಕ್ಕೆ ಸಜ್ಜಾಗಿ ನಿಂತಿರುವುದನ್ನು ಈ ಸಂಕಲನ ತಿಳಿಸುತ್ತದೆ. ಕಾವ್ಯ ಜನಪರವಾಗಬೇಕೆಂಬ ಈ ದಿನಗಳಲ್ಲಿ ಸಬರದವರ ಈ ಸಂಕಲನ ಹಿಂದಿನವರು ತಿಳಿದುಕೊಂಡಂತೆ ಮನ ಅರಳಿಸುವುದಕ್ಕಾಗಿರದೆ, ಕೆರಳಿಸುವುದಕ್ಕಾಗಿರುವುದನ್ನು ಇಲ್ಲಿಯ ಕವಿತೆಗಳು ಝಳಪಿಸುತ್ತವೆ"[1] ಎಂದಿದ್ದಾರೆ.

ಬಂಡಾಯ ಧೋರಣೆಯ ಕವಿ ಸಬರದ ಕನ್ನಡ ಸಾಹಿತ್ಯ ಲೋಕಕ್ಕೆ 'ಹೋರಾಟ', 'ಮೂಡಲಕ ಕೆಂಪ ಮೂಡ್ಯಾವ', 'ದನಿಯೆತ್ತಿ ಹಾಡೇನ', 'ಬೆಳದಿಂಗಳು ಬಿಸಿಲಾಯಿತು', 'ನನ್ನವರ ಹಾಡು', 'ಜೇನಹನಿಗಳು', 'ಪದಕಟ್ಟಿ ಹಾಡೇನ', 'ಸಬರದ ಕವಿತೆಗಳು', 'ಕೆಂಡ ಸಂಪಿಗೆ', 'ಸಬರದ ಬಸವನ ವಚನಗಳು' 'ಹೇಳೆ ಸಖಿ', 'ಸಬರದ ಶಾಯರಿಗಳು', 'ಗುಬ್ಬಿಯೊಂದು ಗೂಡು ಕಟ್ಟಾದೊ' ಮುಂತಾದ ಕವನ

ಸಂಕಲನಗಳನ್ನು ಕೊಡುಗೆಯಾಗಿ ನೀಡಿದ್ದಾರೆ.

**ನಾಟಕ:**

ಸೃಜನ ಸಾಹಿತ್ಯದಲ್ಲಿ ಕಾವ್ಯದಂತೆ ನಾಟಕವು ಸಬರದರ ಆಸಕ್ತಿಯ ಕ್ಷೇತ್ರಗಳಲ್ಲೊಂದು. ಇವರು ಬಾಲ್ಯದಿಂದಲೇ ನಾಟಕದ ಬಗೆಗೆ ಅಪಾರ ಒಲವು ಹೊಂದಿದ್ದರು. ಹಲಗೇರಿಯ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿರುವಾಗಲೇ ವೃತ್ತಿ ರಂಗಭೂಮಿಯ ಮೂಲಕ ನಾಟಕ ರಂಗವನ್ನು ಪ್ರವೇಶಿಸಿದರು. ಅನಂತರ ನಾಟಕಗಳಲ್ಲಿ ನಾಯಕ ನಟರಾಗಿ ಅಭಿನಯಿಸಿದರು. ಗದುಗಿನ ಜೆ.ಟಿ.ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವಾಗಲೇ ಶ್ರೀರಂಗರ ಅಶ್ವಮೇಧ ನಾಟಕವನ್ನು ಯಶಸ್ವಿಯಾಗಿ ಪ್ರಯೋಗಿಸಿದರು. ಹೀಗೆ ನಾಟಕದ ಬಗೆಗೆ ಒಲವು ಹೊಂದಿರುವ ಸಬರದರು ಬಂಡಾಯ ನೆಲೆಗಟ್ಟಿನಲ್ಲಿ ಅನೇಕ ನಾಟಕಗಳನ್ನು ರಚಿಸಿದರು. ಪ್ರಯೋಗಶೀಲತೆಯನ್ನು ಮೈಗೂಡಿಸಿಕೊಂಡ ಸಬರದರು ಕನ್ನಡ ನಾಟಕ ಕ್ಷೇತ್ರದಲ್ಲಿ 'ಪ್ರತಿರೂಪ'(1977) ಎಂಬ ಅಸಂಗತ ನಾಟಕದ ಮೂಲಕ ಪ್ರವೇಶಿಸಿ ಮುಂದೆ ಗೀತಾನಾಟಕ, ಬೀದಿನಾಟಕ, ಏಕಾಂಕ ನಾಟಕ ಮತ್ತು ಪೂರ್ಣಾವಧಿಯ ನಾಟಕಗಳನ್ನು ರಚಿಸಿದರು. ಇವರು ಎಲ್ಲ ನಾಟಕಗಳು ಸಮಾಜದಲ್ಲಿ ನಡೆಯುವ ವಿವಿಧ ಬಗೆಯ ಶೋಷಣೆ, ಮೂಢನಂಬಿಕೆ, ಪ್ರಜಾಪ್ರಭುತ್ವದ ಹೆಸರಿನಲ್ಲಿ ನಡೆದಿರುವ ರಾಜಕೀಯ ಭ್ರಷ್ಟಾಚಾರ ಇತ್ಯಾದಿ ಘಟನೆಗಳ ಮೇಲೆ ಕ್ಷ-ಕಿರಣ ಬೀರುವ ವಿಭಿನ್ನವಾದ ವಸ್ತುಗಳನ್ನು ಒಳಗೊಂಡಿವೆ.

ಸಬರದರು 'ರೆಕ್ಕೆ ಮೂಡಿದಾಗ ಮತ್ತು ಬೆಳ್ಳಿ'(1991), 'ನರಬಲಿ'(1992), 'ಬೆಳ್ಳಕ್ಕಿ ಸಾಲು'(1993), ಮೂರು ಬೀದಿ ನಾಟಕಗಳು(2001), ನಾಕು ಬೀದಿ ನಾಟಕಗಳು(1999), ಐದು ಬೀದಿ ನಾಟಕಗಳು(2005), ಸಬರದ ನಾಟಕಗಳು(2012), ನಾಕು ಏಕಾಂಕ ನಾಟಕಗಳು(2015), ಅಂಬಿಗ ನಿನ್ನ ನಂಬಿದೆ(2016), ಮತ್ತೊಬ್ಬ ರಾಧೆ(2017) ಮೊದಲಾದ ನಾಟಕಗಳನ್ನು ರಚಿಸಿದ್ದಾರೆ.

**ವಿಚಾರ ಸಾಹಿತ್ಯ:**

ಸಬರದರು ಕವಿ, ನಾಟಕಕಾರ, ವಿಮರ್ಶಕ, ಸಂಶೋಧಕರಾಗಿರುವಂತೆ ಪ್ರಖರ ಪ್ರಗತಿಪರ ಚಿಂತಕರೂ ಬಂಡಾಯದ ಗಟ್ಟಿ ಧ್ವನಿಯುಳ್ಳ ಲೇಖಕರು ಆಗಿದ್ದಾರೆ. ಶರಣ ಚಳುವಳಿಯಿಂದ ಪ್ರಭಾವಿತರಾದ ಇವರು ಜಾಗತಿಕ ಚಿಂತನೆಗಳನ್ನು ಮೈಗೂಡಿಸಿಕೊಂಡಿದ್ದಾರೆ. ಬುದ್ಧ ಬಸವ ಅಂಬೇಡ್ಕರ್ ಅವರ ಸಿದ್ಧಾಂತಗಳ ಬಗೆಗೆ ಆಳವಾದ ಅಧ್ಯಯನ ನಡೆಸಿರುವ ಇವರು ಮಾರ್ಕ್ಸ್, ಗಾಂಧಿ, ಲೋಹಿಯಾ ಅವರ ಸಿದ್ಧಾಂತಗಳ ಬಗೆಗೆ ಅಪಾರ ಜ್ಞಾನ ಸಂಪಾದಿಸಿದ್ದಾರೆ. ಇವರು ಜಗತ್ತಿನಲ್ಲಿ ಚರ್ಚೆಯಾಗುತ್ತಿರುವ ಯಾವುದೇ ಒಂದು ಸಿದ್ಧಾಂತದ ವಕ್ತಾರರಾಗದೆ ಸಮಾಜವಾದಿ ಸಿದ್ಧಾಂತಗಳನ್ನು ಪ್ರಸ್ತುತ ಸಂದರ್ಭದಲ್ಲಿ ಪುನರ್ ಕಟ್ಟಿಕೊಳ್ಳಬೇಕೆಂಬ ಬಲವಾದ

ನಿಲುವು ಹೊಂದಿದ್ದಾರೆ. ಹೀಗಾಗಿ ಸಬರದ ಅವರು ಮಂಡಿಸುವ, ಚರ್ಚಿಸುವ ವಿಷಯಗಳು ಎಲ್ಲರನ್ನು ತನ್ನತ್ತ ಸೆಳೆಯುತ್ತವೆ. ತುಂಬ ಸರಳವಾದ ನುಡಿಯಲ್ಲಿ, ಉದಾಹರಣೆ ಸಹಿತ ಪ್ರಗತಿಪರವಾದ ವಿಚಾರಗಳನ್ನು ಮಂಡಿಸುತ್ತಾರೆ. ಇವರಿಗೆ ವಿಚಾರ ಸಾಹಿತ್ಯಕ್ಕೆ ಸಂಬಂಧಿಸಿದ 08 ಕೃತಿಗಳು, ಐವತ್ತಕ್ಕೂ ಹೆಚ್ಚು ವಿಚಾರ ಸಾಹಿತ್ಯದ ಲೇಖನಗಳು ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಸಾಹಿತ್ಯ ಸಮ್ಮೇಳನಗಳಲ್ಲಿ, ವಿಚಾರ ಸಂಕಿರಣಗಳಲ್ಲಿ, ಪುನಶ್ಚೇತನ ಶಿಬಿರಗಳಲ್ಲಿ ಅನೇಕ ವೈಚಾರಿಕ ಪ್ರಬಂಧಗಳನ್ನು ಮಂಡಿಸಿದ್ದಾರೆ. ವೈಚಾರಿಕತೆಯನ್ನು ಕೇವಲ ಮಂಡಿಸುವುದಕ್ಕೆ ಸೀಮಿತ ಮಾಡಿಕೊಳ್ಳದೆ ನಿಜ ಜೀವನದಲ್ಲಿ ಅಳವಡಿಸಿಕೊಂಡು ಹಲವಾರು ಜನಪರ ಹೋರಾಟಗಳ ನೇತೃತ್ವ ವಹಿಸಿಕೊಂಡು ಕೆಲಸ ಮಾಡಿದ್ದಾರೆ. ಇದರ ಕುರಿತು ಬಂಡಾಯ ಚಳುವಳಿಯ ನಾಯಕ ಬರಗೂರು ರಾಮಚಂದ್ರಪ್ಪನವರು ಸಬರದರ 'ಬಯಲ ಬೆಳಕು' ಎಂಬ ಕೃತಿಯ ಮುನ್ನುಡಿಯಲ್ಲಿ ಹೀಗೆ ಹೇಳುತ್ತಾರೆ. "ಬಸವರಾಜ ಸಬರದ ಅವರ ಈ ಕೃತಿಯಲ್ಲಿನ ಎಲ್ಲ ಲೇಖನಗಳಲ್ಲೂ ಜಾತ್ಯತೀತ, ಜನಪರ ನಿಲುವುಗಳ ಒತ್ತಾಸೆಯಿದೆ. ಸಮಕಾಲೀನ ಅನುಸಂಧಾನದ ಫಲಿತವಿದೆ. ಆದರೆ ಲೇಖನಗಳ ಅಧ್ಯಯನದ ಅರಿವು, ಆಳ, ಅಗಲಗಳು ಒಂದೇ ಅಳತೆಯಲ್ಲಿವೆಯೆಂದು ಹೇಳಲಾಗದು. ವಿಭಿನ್ನವೂ ವೈವಿಧ್ಯವೂ ಆಗಿರುವ ಲೇಖನಗಳಲ್ಲಿ ಕೆಲವೊಮ್ಮೆ ಹಸಿತನವೂ ಇದೆ; ಬಿಸಿತನವೂ ಇದೆ. ಆದರೆ ಹುಸಿತನದ ಹುನ್ನಾರ ಇಲ್ಲ. ಇವರು ಸುಳ್ಳಿಗಾಗಿ ಅಕ್ಷರ ಶಕ್ತಿಯನ್ನು ಬಳಸುವುದಿಲ್ಲ. ತಾವು ನಂಬಿದ 'ಸತ್ಯ'ಕ್ಕಾಗಿಯೇ ಅಕ್ಷರಾಭಿವ್ಯಕ್ತಿಯ ಶಕ್ತಿಯನ್ನು ಬಳಸುತ್ತಾರೆ. ಒಂದೊಮ್ಮೆ ಇವರ ಅಭಿಮತ 'ತಪ್ಪು' ಎಂದು ಕೆಲವರಿಗೆ ಅನ್ನಿಸಬಹುದೇ ಹೊರತು 'ಸುಳ್ಳು' ಎಂದು ಹೇಳಲಾಗುವುದಿಲ್ಲ. ಆದರೆ ಒಂದಂತೂ ನಿಜ, ಬಸವರಾಜ ಸಬರದ ಅವರ ಆಶಯಗಳಲ್ಲಿ ಅಸ್ಪಷ್ಟತೆಯಿಲ್ಲ. ದೃಷ್ಟಿಕೋನದಲ್ಲಿ ಸಂಕುಚಿತತೆಯಿಲ್ಲ. ಚಳುವಳಿಯ ಬಿರುಸು, ವಿದ್ವತ್ತಿನ ಬೆಳಸು ಒಂದಾಗಿ ಹುಟ್ಟಿದ ಬೆಳಕಿಗೆ ಬರವಿಲ್ಲ. ಇದೇ ಬಸವರಾಜ ಸಬರದ ಅವರ ಬರಹಗಳ ವಿಶಿಷ್ಟತೆ"[2] ಎಂದಿದ್ದಾರೆ.

ಸಬರದರು ಜನಪದ ದೇವತೆಗಳು–ಶಿಷ್ಟದೇವತೆಗಳು (1994), ವಿಚಾರ ಸಂಪದ(1995), ಕರ್ಮಸಿದ್ಧಾಂತ (1998), ಶಾಸನಗಳ ಪ್ರಭುತ್ವ ಮತ್ತು ಜನತೆ(1999), ಸಮುದಾಯ ಮತ್ತು ಸಂಸ್ಕೃತಿ(2002), ಮರುಚಿಂತನೆ (2009), ಚಿಂತನ ಲೇಖನಗಳು(2017) ಮೊದಲಾದ ಕೃತಿಗಳು ಪ್ರಕಟವಾಗಿವೆ.

**ಆ) ಸೃಜನೇತರ ಸಾಹಿತ್ಯ:**

**ಸಂಶೋಧನೆ–ವಿಮರ್ಶೆ:**

ಸೃಜನ ಸಾಹಿತ್ಯದಂತೆ ಸೃಜನೇತರ ಸಾಹಿತ್ಯವಾದ ಸಂಶೋಧನೆ–ವಿಮರ್ಶೆ ಕ್ಷೇತ್ರಕ್ಕೆ ಸಬರದ ಅವರ ಕೊಡುಗೆ ಅಪಾರವಾದದ್ದು. ಸಬರದರು ಸಾಹಿತ್ಯ

ಸಂಶೋಧನೆಯಲ್ಲಿ ಹೆಚ್ಚು ತೊಡಗಿಸಿಕೊಂಡಿದ್ದಾರೆ. ಆಧುನಿಕ ಸಾಹಿತ್ಯ ವಿಮರ್ಶೆಯ ಜತೆಗೆ, ವಿಮರ್ಶೆಯ ಸಿದ್ಧಾಂತಗಳನ್ನು ಕಟ್ಟಿಕೊಟ್ಟಿದ್ದಾರೆ. ಇವರ ವಿಮರ್ಶೆ ಕೃತಿಗಳು ಕ್ಲಿಷ್ಟವಾಗಿರದೆ, ಯಾವುದೇ ಗೊಂದಲಗಳು ಇಲ್ಲದೇ ಸರಳವಾಗಿ ಓದಿಸಿಕೊಂಡು ಹೋಗುತ್ತವೆ. ಇವರ ಸಂಶೋಧನೆ–ವಿಮರ್ಶೆಯ ಕುರಿತು ರಮ್ಯ.ಎನ್ ಅವರು 'ಸಬರದ ಸಾಹಿತ್ಯ ಸಮೀಕ್ಷೆ' ಕೃತಿಯಲ್ಲಿ ಈ ರೀತಿ ಹೇಳುತ್ತಾರೆ. "ಇವರ ವಿಮರ್ಶಾ ಲೇಖನಗಳಲ್ಲಿ ವೈಚಾರಿಕ ಸ್ಪಷ್ಟತೆಯಿದೆ, ತೌಲನಿಕ ದೃಷ್ಟಿಕೋನವಿದೆ. ವಸ್ತುನಿಷ್ಠ ಮೌಲ್ಯಮಾಪನವಿದೆ. ಇನ್ನು ಸಂಶೋಧನೆಯಲ್ಲಿ ಸಾಹಿತ್ಯ ವಿಮರ್ಶೆಯಿದೆ. ಸಾಹಿತ್ಯ ವಿಮರ್ಶೆಯಲ್ಲಿ ಸಂಶೋಧನಾತ್ಮಕ ವಿಚಾರಗಳಿವೆ"[3] ಎಂದಿದ್ದಾರೆ. ಇವರ ಸಂಶೋಧನಾ ವಿಚಾರಗಳು ಮತ್ತು ವಿಮರ್ಶಾ ವಿಚಾರಗಳು ಪರಸ್ಪರ ಬೆರೆತು ಹೋಗಿವೆ. ಅವರು ಸಂಶೋಧನೆ–ವಿಮರ್ಶೆ ಕ್ಷೇತ್ರಕ್ಕೆ 50 ಕೃತಿಗಳನ್ನು ಕೊಡುಗೆಯಾಗಿ ನೀಡಿದ್ದಾರೆ. ಅವುಗಳಲ್ಲಿ ವಚನ ಸಾಹಿತ್ಯ ಕೃತಿಗಳು–25, ಜನಪದ ಸಾಹಿತ್ಯ ಕೃತಿಗಳು–10, ಆಧುನಿಕ ಸಾಹಿತ್ಯ ಕೃತಿಗಳು–10, ತಾತ್ವಿಕ ವಿಮರ್ಶಾ ಕೃತಿಗಳು–05 ಸೇರಿವೆ.

ಸಬರದರ ವಚನ ಸಾಹಿತ್ಯ ವಿಮರ್ಶೆ ಕೃತಿಗಳು ಕುರಿತು ಡಾ.ರಮ್ಯ.ಎನ್. ತಮ್ಮ ಸಂಶೋಧನ ಪ್ರಬಂಧದಲ್ಲಿ "ವಚನ ಸಾಹಿತ್ಯದ ಸಂಶೋಧನೆಯಲ್ಲಿ ಇವರ ತಾತ್ವಿಕ ವಿಮರ್ಶೆ ಗಮನ ಸೆಳೆಯುತ್ತದೆ. ವಚನ ಸಾಹಿತ್ಯವನ್ನು ವರ್ತಮಾನದಲ್ಲಿಟ್ಟು ಚಿಂತನೆ ನಡೆಸಿರುವುದು ವಿಶೇಷವಾಗಿದೆ. ಜಾಗತೀಕರಣದ ಹಿನ್ನೆಲೆಯಲ್ಲಿ, ನವ ವಸಾಹತೀಕರಣದ ಸಂದರ್ಭದಲ್ಲಿ ವಚನ ಸಾಹಿತ್ಯ ಹೇಗೆ ಪ್ರಸ್ತುತವಾಗುತ್ತದೆಂಬುದನ್ನು ಕುರಿತು ಇವರ ಅನೇಕ ಕೃತಿಗಳು ಚರ್ಚಿಸುತ್ತವೆ. ಶೂನ್ಯ ಸಂಪಾದನೆಗಳ ಬಗೆಗೆ ಬರೆದ ಕೃತಿಯಂತೂ ಹೊಸ ಚರ್ಚೆಯನ್ನು ಹುಟ್ಟು ಹಾಕುತ್ತದೆ. ವಚನ ಸಾಹಿತ್ಯವನ್ನು ಈ ಹಿಂದೆ ಧಾರ್ಮಿಕ ನೆಲೆಯಲ್ಲಿ ಮಾತ್ರ ಅಧ್ಯಯನ ಮಾಡಲಾಗಿತ್ತು. ಆದರೆ ಸಬರದ ಅವರು ತಮ್ಮ 25 ಕೃತಿಗಳಲ್ಲಿ ವಚನ ಸಾಹಿತ್ಯವನ್ನು ಅಂತರ್‌ಶಿಸ್ತೀಯ ಅಧ್ಯಯನದ ಮೂಲಕ ಆಧುನೀಕರಣಗೊಳಿಸಿದ್ದಾರೆ. ವಚನ ಸಾಹಿತ್ಯದ ಬಹುಶಾಸ್ತ್ರೀಯ ಅಧ್ಯಯನಗಳು ಇವಾಗಿವೆ."[4] ಎಂದಿದ್ದಾರೆ. ಹನ್ನೆರಡನೆ ಶತಮಾನದ ವಚನ ಸಾಹಿತ್ಯದಲ್ಲಿರುವ ಬಂಡಾಯ ಧೋರಣೆ, ದಲಿತಪರ ಕಾಳಜಿ, ಸಾಮಾಜಿಕ ನ್ಯಾಯ, ಸ್ತ್ರೀ ಸಮಾನತೆ, ದಾಂಪತ್ಯದ ಪರಿಕಲ್ಪನೆ, ಲಿಂಗ ರಾಜಕಾರಣ, ವೈಜ್ಞಾನಿಕತೆ, ವೈಚಾರಿಕತೆ, ಆರ್ಥಿಕ ಚಿಂತನೆ, ಮಾನವ ಸಂಪನ್ಮೂಲಗಳು, ಉಪಸಂಸ್ಕೃತಿಗಳು ಹೀಗೆ ಅನೇಕ ಹೊಸ ಚಿಂತನೆಗಳ ಮೂಲಕ ವಚನ ಸಾಹಿತ್ಯವನ್ನು ಆನ್ವಯಿಕ ವಿಮರ್ಶೆಗೆ – ತೌಲನಿಕ ವಿಮರ್ಶೆಗೆ ಒಳಪಡಿಸಿದ್ದಾರೆ. ಹೀಗಾಗಿ ಇವರ ವಚನ ಸಾಹಿತ್ಯ ಕುರಿತ ಸಂಶೋಧನಾ ಕೃತಿಗಳು ತುಂಬ ಹೊಸತನದಿಂದ ಕೂಡಿವೆ. ಇವುಗಳಲ್ಲಿ 'ವಚನ ಚಳುವಳಿ', 'ವಚನ ಸಂಸ್ಕೃತಿ', 'ವಚನಗಳ ಪ್ರಾಯೋಗಿಕ ವಿಮರ್ಶೆ', 'ಶರಣರು ಮತ್ತು ದಾಂಪತ್ಯ', 'ಶೂನ್ಯ ಸಂಪಾದನೆ–ಪ್ರಸ್ತುತ ಸವಾಲುಗಳು',

'ಬಸವಧರ್ಮ', 'ಹೈದರಾಬಾದ್ ಕರ್ನಾಟಕ ವಚನ ಸಾಹಿತ್ಯ ಚರಿತೆ'' ಈ ಮೊದಲಾದ ಕೃತಿಗಳು ಪ್ರಮುಖವಾಗಿದ್ದು, ಈ ಎಲ್ಲಾ ವಚನ ವಿಮರ್ಶೆಯ ಕೃತಿಗಳು ಸಾಹಿತ್ಯ ಓದುಗರ ಗಮನ ಸೆಳೆದು ಹಲವು ಪ್ರಶಸ್ತಿಗಳನ್ನು ಪಡೆದಿವೆ.

ಜನಪದ ಸಾಹಿತ್ಯವನ್ನು ಇವರು ಸಂಪ್ರದಾಯದ ಹಿನ್ನೆಲೆಯಲ್ಲಿ ನೋಡದೆ, ಅದು ಜಾಗತೀಕರಣಕ್ಕೆ ಪರ್ಯಾಯವಾದುದೆಂದು ಸ್ಪಷ್ಟಪಡಿಸಿದ್ದಾರೆ. 'ಬಂಡಾಯ ಜಾನಪದ' ಕೃತಿಯಲ್ಲಿ ಈ ವಿಚಾರಗಳು ಸ್ಪಷ್ಟವಾಗಿವೆ. ಶಿಷ್ಟ ಕಾವ್ಯದಲ್ಲಿ ಅದ್ಭುತವಾಗಿ ಬಳಕೆಯಾಗಿರುವ ಜಾನಪದವನ್ನು ಇವರು ಹೊರಗೆ ತೆರೆದು ತೋರಿಸಿದ್ದಾರೆ. ಬೇಂದ್ರೆ ಕಾವ್ಯದಲ್ಲಿರುವ ಜಾನಪದ, ಬಂಡಾಯ ಕಾವ್ಯದಲ್ಲಿರುವ ಜಾನಪದ ಹೇಗೆ ವೈವಿಧ್ಯತೆಯಿಂದ ಕೂಡಿರುತ್ತವೆಯೆಂಬುದನ್ನು ನಿರೂಪಿಸಿದ್ದಾರೆ. ಜನಪದ ದೈವಗಳನ್ನು ಕುರಿತು, ಜನಪದ ಕಲೆಗಳನ್ನು ಕುರಿತು ವಿಶೇಷವಾಗಿ ಅಧ್ಯಯನ ನಡೆಸಿದ್ದಾರೆ. ಹೈದರಾಬಾದ್ ಕರ್ನಾಟಕದ ತತ್ವಪದಗಳನ್ನು ಕುರಿತು ಅನೇಕ ಕೃತಿಗಳನ್ನು ಪ್ರಕಟಿಸಿರುವ ಇವರು ತತ್ವಪದಗಳನ್ನು ನೋಡುವ ದೃಷ್ಟಿಕೋನವೇ ವಿಭಿನ್ನವಾಗಿದೆ. ಜಾನಪದದ ವಿವಿಧ ಆಯಾಮಗಳನ್ನು ಮೊದಲ ಬಾರಿಗೆ ಪರಿಚಯಿಸಿದ್ದು, ಸಂಸ್ಕೃತಿ ಚಿಂತನೆಯ ಹಿನ್ನೆಲೆಯಲ್ಲಿ ಜಾನಪದ ಹೇಗೆ ಪ್ರಮುಖ ಪಾತ್ರ ವಹಿಸುತ್ತದೆಂಬುದನ್ನು ಸ್ಪಷ್ಟಪಡಿಸಿದ್ದಾರೆ. ಜಾನಪದ ಮಹಿಳಾ ವಿಮರ್ಶೆಯಂತೂ ಕನ್ನಡಕ್ಕೆ ವಿನೂತನವಾದುದಾಗಿದೆ. ಮಹಿಳಾ ವಿದ್ವಾಂಸರು ಜಾನಪದವನ್ನು ಹೇಗೆ ನೋಡಿದ್ದಾರೆ? ಮಹಿಳಾ ಜಾನಪದ ಹೇಗೆ ವಿಶಿಷ್ಟವಾಗಿದೆ? ಎಂಬಂತಹ ಪ್ರಶ್ನೆಗಳನ್ನೆತ್ತಿಕೊಂಡು ಚರ್ಚಿಸಿರುವ ರೀತಿ ಕುತೂಹಲಕಾರಿಯಾಗಿದೆ. ಸಾಂಪ್ರದಾಯಿಕ ಜಾನಪದ ವಿದ್ವಾಂಸರು ಇಲ್ಲಿ ಬರುವ ಸತಿ ಪದ್ಧತಿ, ಬಲಿ ಪದ್ಧತಿ, ಕೆರೆಗೆ ಹಾರ, ಧಾರ್ಮಿಕ ಆಚರಣೆಗಳು ಮೊದಲಾದವುಗಳನ್ನು ಸಾಂಪ್ರದಾಯಿಕ ನೆಲೆಯಲ್ಲಿ ಅಧ್ಯಯನ ಮಾಡಿದರೆ, ಸ್ತ್ರೀವಾದಿ ವಿಮರ್ಶಕಿಯರು ಜಾನಪದವನ್ನು ಹೇಗೆ ಹೊಸ ರೀತಿಯಲ್ಲಿ, ವೈಜ್ಞಾನಿಕ ನೆಲೆಯಲ್ಲಿ ಚರ್ಚಿಸಿದ್ದಾರೆಂಬುದನ್ನು ಸಬರದ ಅವರು ತಮ್ಮ ವಿಮರ್ಶೆಯ ಮೂಲಕ ಸ್ಪಷ್ಟಪಡಿಸಿದ್ದಾರೆ. ಹೀಗೆ ಜಾನಪದವನ್ನು ಜಾಗತೀಕರಣದ ನೆಲೆಯಲ್ಲಿ ಅಧ್ಯಯನ ಮಾಡಿರುವ ಪ್ರಮುಖ ಕೃತಿಗಳಲ್ಲಿ 'ಬಹುಮುಖಿ ಜಾನಪದ', 'ಹೈದರಾಬಾದ್ ಕರ್ನಾಟಕದ ತತ್ವಪದಗಳು', 'ಜಾನಪದೀಯ ಮಹಿಳಾ ವಿಮರ್ಶೆ' ಇವೇ ಮೊದಲಾದ ಕೃತಿಗಳು ಗಮನ ಸೆಳೆಯುತ್ತವೆ. ಇವರ 'ಬಹುಮುಖಿ ಜಾನಪದ' ಕೃತಿಗೆ ಜಾನಪದ ಅಕಾಡೆಮಿಯ ಪುಸ್ತಕ ಪ್ರಶಸ್ತಿ ಬಂದಿರುವುದನ್ನು ಗಮನಿಸಬಹುದಾಗಿದೆ.

ಆಧುನಿಕ ಸಾಹಿತ್ಯ ಕುರಿತಂತೆ ಸಬರದ ಅವರ ಹತ್ತು ಕೃತಿಗಳು ಪ್ರಕಟವಾಗಿವೆ. ಅವುಗಳಲ್ಲಿ 'ಹೊಸದಿಕ್ಕು', 'ಸಾಹಿತ್ಯ ಸಂಗತಿ', 'ಸಾಹಿತ್ಯ ಸಿಂಚನ' ಕೃತಿಗಳು ಪ್ರಮುಖವಾಗಿವೆ. 'ಸಾಹಿತ್ಯ ಸಿಂಚನ' ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ

ಪುಸ್ತಕ ಪ್ರಶಸ್ತಿ ಲಭಿಸಿದೆ. ಆಧುನಿಕ ಸಾಹಿತ್ಯದಲ್ಲಿ ದಲಿತ–ಬಂಡಾಯ ಲೇಖಕರ ಕೃತಿಗಳ ಬಗೆಗೆ ಹೆಚ್ಚು ಲೇಖನಗಳನ್ನು ಬರೆದಿದ್ದಾರೆ. ದೇವನೂರು ಮಹಾದೇವ, ಸಿದ್ದಲಿಂಗಯ್ಯ, ಮುಳ್ಳೂರು ನಾಗರಾಜ, ಅರವಿಂದ ಮಾಲಗತ್ತಿ, ಮ.ನ.ಜವರಯ್ಯ ಮೊದಲಾದ ಲೇಖಕರ ಕಾವ್ಯ–ಕಥೆ–ಕಾದಂಬರಿಗಳನ್ನು ಕುರಿತು ಗಂಭೀರವಾದ ಅಧ್ಯಯನ ನಡೆಸಿದ್ದಾರೆ. ಇವರ ಜತೆಗೆ ಕುವೆಂಪು, ಮಾಸ್ತಿ, ಬೇಂದ್ರೆ, ನಿರಂಜನ, ಅನಂತಮೂರ್ತಿ, ಗಿರೀಶ್ ಕಾರ್ನಾಡ್ ಮುಂತಾದ ಹಿರಿಯ ಸಾಹಿತಿಗಳ ಕೃತಿಗಳನ್ನು ಹೊಸ ಓದಿನಲ್ಲಿ ಚರ್ಚಿಸಿದ್ದಾರೆ. ಪ್ರಮುಖ ಕವಿಯತ್ರಿಯರ ಕಾವ್ಯವನ್ನು ಲಿಂಗ ರಾಜಕಾರಣದ ಹಿನ್ನೆಲೆಯಲ್ಲಿ ವಿಶ್ಲೇಷಿಸಿದ್ದಾರೆ. ಹೈದರಾಬಾದ್ ಕರ್ನಾಟಕ ಪ್ರದೇಶದ ಸಿದ್ದಯ್ಯ ಮರಾಣಿಕ, ಶಾಂತರಸ, ಜಯತೀರ್ಥ, ರಾಜ ಪುರೋಹಿತ, ಚೆನ್ನಣ್ಣ ವಾಲೀಕಾರ, ಅಮರೇಶ ನುಗಡೋಣಿ ಮುಂತಾದ ಲೇಖಕರ ಕೃತಿಗಳ ಬಗೆಗೆ ಚರ್ಚಿಸಿದ್ದಾರೆ. ಹೀಗೆ ನವೋದಯದಿಂದ ಹಿಡಿದು ದಲಿತ–ಬಂಡಾಯದ ಘಟ್ಟಗಳಲ್ಲಿ ಬರುವ ಪ್ರಮುಖ ಸಾಹಿತಿಗಳ ಅಧ್ಯಯನವನ್ನು ಸಬರದ ವಸ್ತುನಿಷ್ಠವಾಗಿ, ಹೊಸ ದೃಷ್ಟಿಕೋನದಿಂದ ಅಧ್ಯಯನ ಮಾಡಿರುವುದು ಅವರ ವಿಮರ್ಶಾ ಕೃತಿಗಳಲ್ಲಿ ಕಂಡುಬರುತ್ತದೆ. ಹೀಗೆ ಆಧುನಿಕ ಸಾಹಿತಿಗಳ, ಪ್ರಮುಖ ಲೇಖಕರ ಕೃತಿಗಳ ಬಗೆಗೆ ಪ್ರಾಯೋಗಿಕ–ಆನ್ವಯಿಕ ವಿಮರ್ಶೆ ಮಾಡಿರುವ ಸಬರದ ದಲಿತ–ಬಂಡಾಯ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಹೊಸ ಸಿದ್ಧಾಂತಗಳನ್ನು ಕಟ್ಟಿಕೊಟ್ಟಿದ್ದಾರೆ. ಅವರ 'ಬಂಡಾಯ ಸಾಹಿತ್ಯ' ಎಂಬ ಕೃತಿಯಲ್ಲಿ ಇದನ್ನು ಗಮನಿಸಬಹುದಾಗಿದೆ. ದಲಿತ ಬಂಡಾಯ ಸಾಹಿತ್ಯದಲ್ಲಿರುವ ದಲಿತ ಸಂವೇದನೆ, ಮುಸ್ಲಿಂ ಸಂವೇದನೆ, ಗ್ರಾಮೀಣ ಸಂವೇದನೆ ಹಾಗೂ ಮಹಿಳಾ ಸಂವೇದನೆಗಳ ಬಗೆಗೆ ವಿಶೇಷವಾಗಿ ಚರ್ಚಿಸಿದ ಅವರು, ಕನ್ನಡ ಸಾಹಿತ್ಯದಲ್ಲಿ ಅಪರಿಚಿತವಾಗಿದ್ದ ಈ ಸಂವೇದನೆಗಳನ್ನು ಕುರಿತು ಹೊಸ ಮಾದರಿಯ ಚರ್ಚೆಯನ್ನು ಪ್ರಾರಂಭಿಸಿದ್ದಾರೆ.

ವಿಮರ್ಶೆಯ ಸಿದ್ಧಾಂತಕ್ಕೆ ಸಂಬಂಧಿಸಿದಂತೆ ಇವರ ಕೆಲವು ಕೃತಿಗಳು ಪ್ರಕಟವಾಗಿವೆ. ಅವುಗಳಲ್ಲಿ 'ಸಾಹಿತ್ಯ ವಿಮರ್ಶೆ', 'ಕನ್ನಡ ಸಾಹಿತ್ಯ ವಿಮರ್ಶೆ', 'ಜಾನಪದೀಯ ಮಹಿಳಾ ವಿಮರ್ಶೆ'ಯಂತಹ ಕೃತಿಗಳನ್ನು ಗಮನಿಸಬೇಕಾಗುತ್ತದೆ. ಅವರ 'ಸಾಹಿತ್ಯ ವಿಮರ್ಶೆ' ಕೃತಿ ಸರಳವಾಗಿದ್ದು, ವಿದ್ಯಾರ್ಥಿಗಳಿಗೆ ಸುಲಭವಾಗಿ ಅರ್ಥವಾಗುವಂತಿದ್ದು, ಕನ್ನಡದ ಜಾಯಮಾನದ್ದು ಎನಿಸುತ್ತದೆ. ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಬಹಳ ಉಪಯುಕ್ತವಾಗಿರುವ ಈ ಕೃತಿ ಅನೇಕ ಮರು ಮುದ್ರಣಗಳನ್ನು ಕಂಡಿದೆ. ಹಂಪಿ ಕನ್ನಡ ವಿಶ್ವವಿದ್ಯಾನಿಲಯದಿಂದ ಪ್ರಕಟವಾದ ಇವರ ಚಿಕ್ಕ ಕೃತಿಯಾದ 'ಕನ್ನಡ ಸಾಹಿತ್ಯ ವಿಮರ್ಶೆ' ಕನ್ನಡ ವಿಮರ್ಶಾ ಪರಂಪರೆಯನ್ನು, ಕನ್ನಡದ ಪ್ರಮುಖ ವಿಮರ್ಶಕರನ್ನು ಕುರಿತು ಬರೆದ ಪ್ರಥಮ ಕೃತಿಯಾಗಿದೆ. ನವೋದಯ, ನವ್ಯ, ದಲಿತ–ಬಂಡಾಯ ವಿಮರ್ಶಕರ ಚರಿತ್ರೆಯನ್ನು

ಕಟ್ಟಿಕೊಡುತ್ತಲೇ ಅದರ ವಿಮರ್ಶಾ ಮಾನದಂಡಗಳನ್ನು ಕುರಿತಂತೆ ಹೊಸ ಚರ್ಚೆಯನ್ನೇ ಪ್ರಾರಂಭಿಸಿದ್ದಾರೆ. ವಿಮರ್ಶಾ ಕ್ಷೇತ್ರದಲ್ಲಿ ನಡೆದಿರುವ ರಾಜಕೀಯವನ್ನು ಕುರಿತು ನೇರವಾಗಿಯೇ ಟೀಕಿಸಿದ್ದಾರೆ. ಈಗಾಗಲೇ ಉಲ್ಲೇಖಿಸಿದಂತೆ ರಾಣಿ ಚೆನ್ನಮ್ಮ ವಿಶ್ವವಿದ್ಯಾನಿಲಯದಿಂದ ಪ್ರಕಟವಾಗಿರುವ ಅವರ 'ಜಾನಪದೀಯ ಮಹಿಳಾ ವಿಮರ್ಶೆ' ತುಂಬ ಮಹತ್ವದ ಕೃತಿಯಾಗಿದ್ದು, ಜಾನಪದ ವಿಮರ್ಶಕಿಯರ ವಿಮರ್ಶಾ ಸಾಧ್ಯತೆಗಳನ್ನು ಇಲ್ಲಿ ಮೊದಲ ಬಾರಿಗೆ ಗುರುತಿಸಿದ್ದಾರೆ. ಇದನ್ನು ವಿಸ್ತರಿಸಿದರೆ ಇದೊಂದು ಮಹತ್ವದ ಮಹಿಳಾ ವಿಮರ್ಶಾ ಚರಿತ್ರೆಯಾಗುತ್ತದೆ.

ಸಂಶೋಧನೆ, ವಿಮರ್ಶೆಯ ಕ್ಷೇತ್ರಗಳಲ್ಲಿ ಆಳವಾಗಿ ಅಧ್ಯಯನ ಮಾಡಿರುವ ಇವರು ಮೀಮಾಂಸೆ ಕುರಿತಂತೆ ಕೆಲವು ಕೃತಿಗಳನ್ನು ಪ್ರಕಟಿಸಿದ್ದಾರೆ. ಅವುಗಳಲ್ಲಿ 'ಹೈದರಾಬಾದ್ ಕರ್ನಾಟಕದ ಆಧುನಿಕ ಸಾಹಿತ್ಯ ಮೀಮಾಂಸೆ', 'ಹೈದರಾಬಾದ್ ಕರ್ನಾಟಕದ ರಂಗಭೂಮಿ ಮೀಮಾಂಸೆ' ಹಾಗೂ 'ವಚನ ಸಾಹಿತ್ಯ ಮೀಮಾಂಸೆ' ಇವೇ ಮೊದಲಾದ ಕೃತಿಗಳನ್ನು ಉದಾಹರಿಸಬಹುದಾಗಿದೆ. ಹೀಗೆ ವಿಮರ್ಶೆ, ಸಂಶೋಧನೆ ಹಾಗೂ ಮೀಮಾಂಸೆ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಅನೇಕ ಮೌಲಿಕ ಕೃತಿಗಳನ್ನು ಕನ್ನಡ ಸಾಹಿತ್ಯಕ್ಕೆ ಕೊಡುಗೆಯಾಗಿ ನೀಡಿದ್ದಾರೆ.

**ಇ) ಸಂಕೀರ್ಣ ಸಾಹಿತ್ಯ:**

ಬಸವರಾಜ ಸಬರದ ಅವರ ಕಾವ್ಯ, ನಾಟಕ, ವಿಚಾರ ಸಾಹಿತ್ಯ, ಸಂಶೋಧನೆ ವಿಮರ್ಶೆಯ ಜತೆಗೆ ಇತರ ಸಾಹಿತ್ಯದ ಕೃತಿಗಳನ್ನು ರಚಿಸಿದ್ದಾರೆ. ಅವುಗಳನ್ನು ಅಧ್ಯಯನದ ಅನುಕೂಲಕ್ಕಾಗಿ ಸಂಕೀರ್ಣ ಸಾಹಿತ್ಯ ಕೃತಿಗಳೆಂದು ಅಧ್ಯಯನ ಮಾಡಬಹುದು. ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದಿಂದ 1952 ರಲ್ಲಿ ಪ್ರಕಟವಾದ 'ಬೀದರ್ ಜಿಲ್ಲಾ ಸಾಂಸ್ಕೃತಿಕ ಅಧ್ಯಯನ' ಕೃತಿಯು ಚಿಕ್ಕದಾದರೂ, ಸಂಸ್ಕೃತಿಯ ಅನೇಕ ಚಿಂತನೆಗಳು ಇದರಲ್ಲಿವೆ. ಕನ್ನಡ ನಾಡಿನ ಸಾಂಸ್ಕೃತಿಕ ಇತಿಹಾಸದಲ್ಲಿ ಬೀದರ್ ಜಿಲ್ಲೆಯ ಕೊಡುಗೆ ವಿಶಿಷ್ಟವಾದದ್ದು ಎಂಬುದನ್ನು ಸಬರದ ಅವರು ಇಲ್ಲಿ ಗುರುತಿಸಿದ್ದಾರೆ. ಈ ಕೃತಿ ಬೀದರ್ ಜಿಲ್ಲೆಯ ಇತಿಹಾಸ ಮತ್ತು ಅಲ್ಲಿಯ ಮತ-ಧರ್ಮಗಳ ಪರಿಚಯವನ್ನು ಮಾಡಿಕೊಡುತ್ತದೆ. ಕರ್ನಾಟಕ ವಿಶ್ವವಿದ್ಯಾನಿಲಯ ಏರ್ಪಡಿಸಿದ್ದ ಪ್ರಚಾರೋಪನ್ಯಾಸ ಮಾಲಿಕೆಯಲ್ಲಿ ಮಂಡಿಸಿದ ಪ್ರಬಂಧ ಇದಾಗಿದೆ. ಗುಲ್ಬರ್ಗಾ ವಿಶ್ವವಿದ್ಯಾನಿಲಯದ ಪದವಿ ತರಗತಿಯ ಪಠ್ಯಕ್ಕಾಗಿ ಸಿದ್ಧಪಡಿಸಿದ ಇವರ 'ವ್ಯವಹಾರಿಕ ಕನ್ನಡ' ಕೃತಿಯು 2010 ರಲ್ಲಿ ಪ್ರಕಟವಾದ ಕೃತಿಯಾಗಿದೆ. ಈ ಪುಸ್ತಕದಲ್ಲಿ ಪತ್ರ ವ್ಯವಹಾರದ ವಿಧಾನವನ್ನು ಹಾಗೂ ಪತ್ರ ವ್ಯವಹಾರದ ಪ್ರಕಾರಗಳನ್ನು ಕುರಿತಾಗಿ ವಿವರಿಸಲಾಗಿದೆ. ಈ ಕೃತಿ ವಿದ್ಯಾರ್ಥಿಗಳಿಗೆ ತುಂಬ ಉಪಯುಕ್ತವಾಗಿದ್ದು, ಅನೇಕ ಮುದ್ರಣಗಳನ್ನು ಕಂಡು ವಿದ್ಯಾರ್ಥಿಗಳ ಮನ್ನಣೆ ಗಳಿಸಿದೆ. ಸಬರದ ಅವರು 2001

ರಲ್ಲಿ ಕೊಪ್ಪಳ ಜಿಲ್ಲಾ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದಾಗ ಮಾಡಿದ ಭಾಷಣವೇ ಪುಸ್ತಕ ರೂಪ ಪಡೆದಿದೆ. ಈ ಕಿರು ಪುಸ್ತಕವನ್ನು ಕೊಪ್ಪಳ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು 2011 ರಲ್ಲಿ ಪ್ರಕಟಿಸಿದೆ. ಇದರಲ್ಲಿ ಅನೇಕ ಹೊಸ ವಿಷಯಗಳನ್ನು ಪ್ರಸ್ತಾಪಿಸಿರುವ ಅವರು ಪ್ರಸ್ತುತ ಸವಾಲುಗಳ ಬಗೆಗೆ ಚರ್ಚಿಸಿದ್ದಾರೆ. ಹೀಗೆ ಈ ಮೂರು ಕೃತಿಗಳನ್ನು ಇವರ ಸಂಕೀರ್ಣ ಸಾಹಿತ್ಯದಲ್ಲಿ ಪ್ರಸ್ತಾಪಿಸಲಾಗಿದೆ.

**ಈ) ಸಂಪಾದಿತ ಕೃತಿಗಳು:**

ಸಬರದ ಅವರು ಗ್ರಂಥ ಸಂಪಾದನಾ ಕ್ಷೇತ್ರಕ್ಕೆ ತೊಂಬತ್ತಕ್ಕೂ ಹೆಚ್ಚು ಕೃತಿಗಳನ್ನು ಅವರು ಸಂಪಾದಿಸಿ ಪ್ರಕಟಿಸಿ ಬಹುದೊಡ್ಡ ಕೊಡುಗೆಯನ್ನು ನೀಡಿದ್ದಾರೆ. ಅವರ ಸಂಪಾದಿತ ಕೃತಿಗಳನ್ನು ಪದ್ಯ ಕೃತಿಗಳು, ಗದ್ಯ ಕೃತಿಗಳು ಹಾಗೂ ಪ್ರಧಾನ ಸಂಪಾದಕತ್ವದ ಕೃತಿಗಳು ಎಂದು ಮೂರು ಭಾಗಗಳಾಗಿ ವಿಂಗಡಿಸಬಹುದಾಗಿದೆ. 18 ಸ್ವತಂತ್ರ ಸಂಪಾದಿತ ಪದ್ಯ ಕೃತಿಗಳಿವೆ. ಇವುಗಳಲ್ಲಿ ತತ್ವಪದ ಸಂಪುಟಗಳು, ಕೀರ್ತನೆಯ ಸಂಪುಟಗಳು, ಹೊಸಗನ್ನಡ ಕಾವ್ಯ ಹಾಗೂ ವಚನ ಸಾಹಿತ್ಯ ಕೃತಿಗಳು ಸೇರಿಕೊಂಡಿವೆ. ಇವರ ತತ್ವಪದ ಸಾಹಿತ್ಯದ ಸಂಪುಟಗಳು ಅತ್ಯಂತ ಮಹತ್ವದಾಗಿವೆ. ಇವುಗಳಲ್ಲಿ ಇವರ ಸಂಶೋಧನಾ ಶ್ರಮ ಎದ್ದು ಕಾಣುತ್ತದೆ. ಈ ಸಂಪುಟಗಳು ಕನ್ನಡದಲ್ಲಿ ಮೊದಲ ಬಾರಿಗೆ ಕಾಣಿಸಿಕೊಂಡಿವೆ. ಇವುಗಳಲ್ಲಿ 'ಹೈದರಾಬಾದ್ ಕರ್ನಾಟಕದ ತತ್ವಪದಗಳು', 'ಕೂಡಲೂರು ಬಸವಲಿಂಗ ಶರಣರು ಮತ್ತು ಇತರರ ತತ್ವಪದಗಳು' ಹಾಗೂ 'ತಿರುಳನ್ನಡ ನಾಡಿನ ತತ್ವಪದಗಳು' ಸಂಪುಟಗಳು ಪ್ರಮುಖವಾಗಿವೆ. ಈ ಸಂಪುಟಗಳನ್ನು ಹಂಪಿ ಕನ್ನಡ ವಿಶ್ವವಿದ್ಯಾನಿಲಯ ಹಾಗೂ ಬೆಂಗಳೂರಿನ ಸಂತ ಕವಿ ಕನಕದಾಸ ಅಧ್ಯಯನ ಕೇಂದ್ರ ಪ್ರಕಟಿಸಿವೆ. ತತ್ವಪದ ಕ್ಷೇತ್ರದಲ್ಲಿ ಸಂಶೋಧನೆ ಮಾಡುವವರಿಗೆ ಈ ಸಂಪುಟಗಳು ಆಕರ ಗ್ರಂಥಗಳಾಗಿವೆ.

ಶರಣರ ವಚನಗಳಿಗೆ ಸಂಬಂಧಿಸಿದಂತೆ ಇವರ ವಿಶಿಷ್ಟ ವಚನ ಸಂಕಲನಗಳು ಪ್ರಕಟವಾಗಿವೆ. ಅವುಗಳಲ್ಲಿ 'ಶರಣರ ಬಂಡಾಯದ ವಚನಗಳು', 'ಕಾವ್ಯಾನಂದರ ಆಯ್ದ ವಚನಗಳು', 'ವಚನಕಾರ್ತಿಯರ ಆಯ್ದ ವಚನಗಳು' ಹಾಗೂ 'ಆಯ್ದ ವಚನಗಳು' ಮುಖ್ಯ ಕೃತಿಗಳಾಗಿವೆ. ಈ ಎಲ್ಲಾ ಕೃತಿಗಳು ಗುಲ್ಬರ್ಗಾ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ತರಗತಿಗಳಿಗೆ ಪಠ್ಯಪುಸ್ತಕಗಳಾಗಿವೆ. ಹೊಸಗನ್ನಡ ಕಾವ್ಯಕ್ಕೆ ಸಂಬಂಧಿಸಿದಂತೆ ಇವರು ಚೆನ್ನಣ್ಣ ವಾಲೀಕರ ಅವರ ಜತೆಗೂಡಿ ಹೈದರಾಬಾದ್ ಕರ್ನಾಟಕ ಪ್ರದೇಶದ ಕವಿಗಳ ಪ್ರಾತಿನಿಧಿಕ ಕವನಗಳ ಸಂಪಾದನೆ 'ಕಲ್ಯಾಣ ನಾಡಿನ ಕೆಂಪು ಕವಿತೆಗಳು' ಸಂಕಲನ ಕೃತಿಯಾಗಿದೆ. ಇವರ 'ಆಯ್ದ ಕವನಗಳು' ಸಂಕಲನ ಗುಲ್ಬರ್ಗಾ ವಿಶ್ವವಿದ್ಯಾನಿಲಯದ ಬಿ.ಎ. ಪದವಿ ತರಗತಿಗೆ ಪಠ್ಯವಾಗಿತ್ತು. ಗುಲ್ಬರ್ಗಾ ವಿಶ್ವವಿದ್ಯಾನಿಲಯದ ಸ್ನಾತಕ ಪದವಿಗಳಿಗೆ ಸಿದ್ಧಪಡಿಸಿದ 'ಪ್ರಾತಿನಿಧಿಕ ಹೊಸಗನ್ನಡ

ಕಾವ್ಯ–2012' ಈ ಸಂಗ್ರಹ ಹೊಸಗನ್ನಡದ ಪ್ರಮುಖ ಕವಿಗಳ ಮಹತ್ವದ ಆಯ್ದ ಕವಿತೆಗಳನ್ನೊಳಗೊಂಡಿದ್ದು, ದೀರ್ಘ ಪ್ರಸ್ತಾವನೆ ಮತ್ತು ಕವಿಗಳ ಪರಿಚಯವನ್ನೊಳಗೊಂಡಿದೆ. ಇದು ಕೇವಲ ವಿದ್ಯಾರ್ಥಿಗಳಿಗೆ ಮಾತ್ರವಲ್ಲದೆ, ಕನ್ನಡ ಸಾಹಿತ್ಯ ಓದುಗರಿಗೂ ಅವಶ್ಯಕವಾದ ಪ್ರಾತಿನಿಧಿಕ ಸಂಕಲನವಾಗಿದೆ.

ಸಬರದರು ಪದ್ಯದಂತೆ 10 ಸ್ವತಂತ್ರ ಗದ್ಯ ಕೃತಿಗಳನ್ನು ಸಂಪಾದಿಸಿಕೊಟ್ಟಿದ್ದಾರೆ. ಅವುಗಳಲ್ಲಿ 1992 ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟವಾದ 'ಬಂಡಾಯ ಸಾಹಿತ್ಯದ ತಾತ್ವಿಕ ನೆಲೆಗಳು' ಕೃತಿ ಮುಖ್ಯವಾಗಿದೆ. ಅದೇ ರೀತಿ 'ಸಾಹಿತ್ಯ ಮತ್ತು ಸಮೂಹ ಮಾಧ್ಯಮಗಳು' ಕೃತಿ ಇವರು ಸಂಪಾದಿಸಿರುವ ಮಹತ್ವದ ಸಂಪುಟವಾಗಿದ್ದು ಇದನ್ನು ಗುಲ್ಬರ್ಗಾ ವಿಶ್ವವಿದ್ಯಾನಿಲಯ ಪ್ರಕಟಿಸಿದೆ. ಗುಲ್ಬರ್ಗಾ ವಿಶ್ವವಿದ್ಯಾನಿಲಯದ ಕನ್ನಡ ಶಾಸ್ತ್ರೀಯ ಭಾಷೆಯ ಯೋಜನೆಯಡಿಯಲ್ಲಿ ಪ್ರಕಟವಾಗಿರುವ ಇವರ 'ಶೂನ್ಯ ಸಂಪಾದನೆ' ಕೃತಿಯಲ್ಲಿ ಅನೇಕ ಮೌಲಿಕ ಲೇಖನಗಳಿದ್ದು, ಮಹತ್ವದ ಪ್ರಸ್ತಾವನೆಯಿದೆ. ಹೀಗೆ ಒಟ್ಟು 28 ಸ್ವತಂತ್ರ ಸಂಪಾದಿತ ಕೃತಿಗಳನ್ನು ಹೊರತಂದಿದ್ದಾರೆ.

ಸಬರದ ಅವರ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರು, ಪ್ರಸಾರಂಗದ ನಿರ್ದೇಶಕರು ಆಗಿದ್ದಾಗ ಅವರ ಪ್ರಧಾನ ಸಂಪಾದಕತ್ವದಲ್ಲಿ ಒಟ್ಟು 62 ಕೃತಿಗಳು ಪ್ರಕಟವಾಗಿವೆ. ಅವುಗಳಲ್ಲಿನ ಮೊದಲ ಹತ್ತು ಕೃತಿಗಳಲ್ಲಿ ಗುಲ್ಬರ್ಗಾ ವಿಶ್ವವಿದ್ಯಾನಿಲಯದ ಶಾಸ್ತ್ರೀಯ ಭಾಷೆಯ ಯೋಜನೆಯಡಿಯಲ್ಲಿ ಪ್ರಕಟವಾಗಿರುವ 'ವೃತ್ತಿ ರಂಗಭೂಮಿ' ಹಾಗೂ 'ಗ್ರಾಮೀಣ ರಂಗಭೂಮಿ' ಸಂಪುಟಗಳಿವೆ. 'ಜಾನಪದ ಆಯಾಮಗಳು' ಮತ್ತು 'ಹೈದರಾಬಾದ್ ಕರ್ನಾಟಕದ ಜಾನಪದ ಸಾಧಕರು' ಪುಸ್ತಕಗಳು ಜಾನಪದ ವಿಭಾಗದ ಬೆಳ್ಳಿ ಹಬ್ಬದಾಚರಣೆಯ ಸಂದರ್ಭದಲ್ಲಿ ಪ್ರಕಟವಾದ ಗ್ರಂಥಗಳಾಗಿವೆ.

ಗುಲ್ಬರ್ಗಾ ವಿಶ್ವವಿದ್ಯಾನಿಲಯದ ಪ್ರಸಾರಾಂಗದ ನಿರ್ದೇಶಕರಾಗಿದ್ದಾಗ ಇವರ ಪ್ರಧಾನ ಸಂಪಾದಕತ್ವದಲ್ಲಿ 'ಬೆಳ್ಳಿ ಬೆಳಕುಮಾಲೆ' ಯೋಜನೆಯಡಿಯಲ್ಲಿ 15 ಕೃತಿಗಳು ಪ್ರಕಟವಾಗಿವೆ. ಅವುಗಳಲ್ಲಿ ಜಿಲ್ಲಾ ದರ್ಶನಗಳಿಗೆ ಸಂಬಂಧಿಸಿದ 5 ಕೃತಿಗಳು, 'ನಮ್ಮ ಹಿರಿಯರು ನಮ್ಮ ಹೆಮ್ಮೆ' ಮಾಲೆಯ 10 ಕೃತಿಗಳು ಮತ್ತು 'ಪ್ರಾತಿನಿಧಕ ಸಂಕಲನ ಮಾಲೆ'ಯಡಿಯಲ್ಲಿ 10 ಕೃತಿಗಳು ಹೀಗೆ ಒಟ್ಟು 25 ಕೃತಿಗಳು ಪ್ರಕಟವಾಗಿವೆ. ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿದ್ದಾಗ ಇವರ ಪ್ರಧಾನ ಸಂಪಾದಕತ್ವದಲ್ಲಿ 17 ಪಠ್ಯ ಪುಸ್ತಕಗಳು ಪ್ರಕಟವಾಗಿವೆ. 2006 ರಲ್ಲಿ ಸ್ನಾತಕೋತ್ತರ ಪದವಿ ಪಠ್ಯ ಪುಸ್ತಕಗಳು 'ಸಾಹಿತ್ಯ ಸಂಕಲನ ಮಾಲೆ' ಯೋಜನೆಯಡಿಯಲ್ಲಿ ಪ್ರಕಟವಾಗಿದ್ದು, ಒಟ್ಟು 10 ಪುಸ್ತಕಗಳಿವೆ. ಹೀಗೆ ಇವರ ಪ್ರಧಾನ ಸಂಪಾದಕತ್ವದಲ್ಲಿ ಒಟ್ಟು 62 ಕೃತಿಗಳು ಪ್ರಕಟವಾಗಿವೆ. ಸ್ವತಂತ್ರ ಸಂಪಾದನೆ ಮತ್ತು ಪ್ರಧಾನ ಸಂಪಾದನೆ ಎರಡೂ ಸೇರಿ ಒಟ್ಟು 90 ಸಂಪಾದಿತ ಕೃತಿಗಳಿವೆ. ಈ ಸಂಪಾದಿತ ಕೃತಿಗಳು ಕೇವಲ ಸಂಖ್ಯಾ

ದೃಷ್ಟಿಯಿಂದ ಮಾತ್ರ ಹೆಚ್ಚಿರದೆ ಸತ್ವದ ದೃಷ್ಟಿಯಿಂದಲೂ ಗಮನಿಸುವಂತಿವೆ. ಇವುಗಳಲ್ಲಿ ಅನೇಕ ಕೃತಿಗಳು ಆಕರ ಗ್ರಂಥಗಳಾಗಿರುವುದನ್ನು ಗಮನಿಸಬಹುದಾಗಿದೆ.

ಹೀಗೆ ಸಬರದರು ಕವಿ, ನಾಟಕಕಾರ, ಸಂಶೋಧಕ, ವಿಮರ್ಶಕ, ವೈಚಾರಿಕ ಲೇಖಕರಾಗಿ ಸಾಹಿತ್ಯದ ಎಲ್ಲ ಪ್ರಕಾರದಲ್ಲಿ ಕೃತಿಗಳನ್ನು ರಚಿಸಿ, ಬಂಡಾಯದ ನಿಲುವಿನ ವಿಶಿಷ್ಟ ಗಟ್ಟಿ ಧ್ವನಿಯ ಲೇಖಕರಾಗಿ ಹೊಸಗನ್ನಡ ಸಾಹಿತ್ಯದಲ್ಲಿ ಓದುಗರ ಗಮನ ಸೆಳೆದಿದ್ದಾರೆ.

**ಕೊನೆ ಟಿಪ್ಪಣಿಗಳು:**


1. ಬಸವರಾಜ ಸಬರದ, (1976), ಮೂಡಲಕ ಕೆಂಪು ಮೂಡ್ಯಾವ, ಪಲ್ಲವಿ ಪ್ರಕಾಶನ, ಬೀದರ್, ಪು.ಸಂ. ಬೆನ್ನುಡಿ
2. ಪೋತೆ ಎಚ್.ಟಿ., (2017), ಸಬರದ ಸಾಹಿತ್ಯ ಸಮೀಕ್ಷೆ, ಶ್ರೀಸಿದ್ದಲಿಂಗೇಶ್ವರ ಪ್ರಕಾಶನ ಸರಸ್ವತಿ ಗೋದಾಮ, ಕಲಬುರಗಿ, ಪು.ಸಂ. 22
3. ರಮ್ಯಾ ಎನ್., (2021), ಬಸವರಾಜ ಸಬರದ ಅವರ ನಾಟಕಗಳ ಅಧ್ಯಯನ, ಅಪ್ರಕಟಿತ ಸಂಶೋಧನಾ ಪ್ರಬಂಧ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಪು.ಸಂ. 30
4. ಬಸವರಾಜ ಸಬರದ, (2020), ಬಯಲ ಬೆಳಕು, ಕ್ರಿಯಾ ಮಾಧ್ಯಮ, ಬೆಂಗಳೂರು, ಪು.ಸಂ. ಮುನ್ನುಡಿ

**ಪರಾಮರ್ಶನ ಗ್ರಂಥಗಳು:**


1. ಪೋತೆ ಎಚ್.ಟಿ., (2017), ಸಬರದ ಸಾಹಿತ್ಯ ಸಮೀಕ್ಷೆ, ಶ್ರೀಸಿದ್ದಲಿಂಗೇಶ್ವರ ಪ್ರಕಾಶನ ಸರಸ್ವತಿ ಗೋದಾಮ, ಕಲಬುರಗಿ.
2. ವಿಜಯಶ್ರೀ ಸಬರದ, (2015), ನಡೆದದ್ದೇ ದಾರಿ (ಸಬರದ ಸಾಹಿತ್ಯ ಸೂಚಿ), ಪಲ್ಲವಿ ಪ್ರಕಾಶನ, ಕಲಬುರಗಿ.
3. ರಮ್ಯಾ ಎನ್., (2021), ಬಸವರಾಜ ಸಬರದ ಅವರ ನಾಟಕಗಳ ಅಧ್ಯಯನ, ಅಪ್ರಕಟಿತ ಸಂಶೋಧನಾ ಪ್ರಬಂಧ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ಬಸವರಾಜ ಸಬರದ, (1976), ಮೂಡಲಕ ಕೆಂಪು ಮೂಡ್ಯಾವ, ಪಲ್ಲವಿ ಪ್ರಕಾಶನ, ಬೀದರ್.
5. ಬಸವರಾಜ ಸಬರದ, (2020), ಬಯಲ ಬೆಳಕು, ಕ್ರಿಯಾ ಮಾಧ್ಯಮ, ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.